ವಿಷ್ಣು ಭವನ್ ಸ್ವೀಟ್ಸ್
Vishnu Bhavan Sweets
❖ KUVEMPUNAGAR, Nrupathunga Road. ☎: 0821-2462700
❖ OPP. B.N. ROAD, KSRTC BUS STAND. ☎: 0821-2440110

ಆಂದೋಲನ
ದಿನಪತ್ರಿಕೆ
ಸಂಪಾದಕ : ರಾಜಶೇಖರ ಕೋಟಿ

ಮೈಸೂರು ನಂದಿನಿ ಫ್ಯಾಮಿಲಿ ರೆಸ್ಟೋರೆಂಟ್
mysore nandhini Heritage
Family Restaurant Veg & Non Veg
Andhra Style Irwin Road, Near KSRTC Bus Stand Mysuru - 01
Tandoori Chinese Sea Food
Ph: 0821 - 4191009, 2430241
90082 85555
FREE HOME DELIVERY
Parking Available

ಲಂಡನ್‌ನಲ್ಲಿ ಭಾನುವಾರ ನಡೆದ ಟೆನ್ನಿಸ್ ಚಾಂಪಿಯನ್‌ಷಿಪ್‌ನಲ್ಲಿ ಸ್ವಿಜರ್ಲೆಂಡ್‌ನ ರೋಜರ್ ಫೆಡರರ್ ೮ನೇ ಬಾರಿಗೆ ಪ್ರತಿಷ್ಠಿತ ವಿಂಬಲ್ಡನ್ ಪ್ರಶಸ್ತಿ ಗೆದ್ದು ಇತಿಹಾಸ ನಿರ್ಮಿಸಿದರು. ಕ್ರೊವೇಶಿಯಾದ ಮರಿನ್ ಸಿಲಿಕ್ ಅವರನ್ನು ೬–೩, ೬–೧, ೬–೪, ನೇರ ಸೆಟ್‌ಗಳಿಂದ ಸೋಲಿಸಿದರು.

೮ನೇ ಬಾರಿ ವಿಂಬಲ್ಡನ್ ಪ್ರಶಸ್ತಿ ಗೆದ್ದ ಫೆಡರರ್

ಕೋಮುವಾದ ಒಡೆದಾಳುವ ನೀತಿ ವಿರುದ್ಧ ಸಮರ

ರಾಷ್ಟ್ರಪತಿ ಚುನಾವಣೆ ಒಡೆದಾಳುವ ನೀತಿ, ಕೋಮುವಾದ ವಿರುದ್ಧದ ಹೋರಾಟ ಎಂದು ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಹೇಳುವ ಮೂಲಕ ಬಿಜೆಪಿಯತ್ತ ಬೊಟ್ಟು ಮಾಡಿದ್ದಾರೆ.

ಗರಿಷ್ಠ: ೩೦° । ಕನಿಷ್ಠ: ೨೧°
ಮೋಡ ಕವಿದ ವಾತಾವರಣ ಸಾಮಾನ್ಯ ಮಳೆ ಸಾಧ್ಯತೆ

ಸಂಪುಟ: ೪೬ ಸಂಚಿಕೆ: ೧೯೧ ರಾಷ್ಟ್ರೀಯ ಶಕ ೧೯೩೯ ವರ್ಷ –ಆಷಾಢ ೨೬ ● ಅಷ್ಟಮಿ–ಅಶ್ವಿನಿ, ಸೋಮವಾರ, ಜು.೧೭, ೨೦೧೭, ದೂರವಾಣಿ: ೨೪೪೫೫೩೧, ೨೪೪೫೫೩೪, ೨೪೪೫೫೩೫, ಫ್ಯಾಕ್ಸ್: ೨೪೪೫೫೩೩, ಪುಟ: ೧೨, ರೂ. ೩

ಗೋ ರಕ್ಷಣೆ ನೆಪದಲ್ಲಿ ಹಿಂಸೆ; ಕಠಿಣ ಕ್ರಮಕ್ಕೆ ಮೋದಿ ಸೂಚನೆ

ಗೋ ರಕ್ಷಕರ ಹಿಂಸಾಚಾರಕ್ಕೆ ರಾಜಕೀಯ, ಕೋಮು ಬಣ್ಣ ಬೇಡ; ರಾಜಕೀಯ ಪಕ್ಷಗಳಿಗೆ ಮನವಿ

ಹೊಸದಿಲ್ಲಿ,ಜು.೧೬– ಗೋ ರಕ್ಷಣೆ ಹೆಸರಿನಲ್ಲಿ ಹಿಂಸಾಚಾರ ಮಾಡುವುದನ್ನು ಕೇಂದ್ರ ಸರ್ಕಾರ ಸಹಿಸುವುದಿಲ್ಲ. ಗೋ ರಕ್ಷಣೆ ನೆಪದಲ್ಲಿ ಹಿಂಸಾಚಾರ ನಡೆಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಿ ಎಂದು ಪ್ರಧಾನಿ ನರೇಂದ್ರ ಮೋದಿ ರಾಜ್ಯ ಸರ್ಕಾರಗಳಿಗೆ ಸೂಚಿಸಿದ್ದಾರೆ.

ದಿಲ್ಲಿಯಲ್ಲಿ ಭಾನುವಾರ ನಡೆದ ಸರ್ವಪಕ್ಷ ನಾಯಕರ ಸಭೆಯಲ್ಲಿ ಮಾತನಾಡಿದ ಅವರು, ಗೋ ರಕ್ಷಣೆ ಹೆಸರಲ್ಲಿ ಹಿಂಸಾಚಾರ ನಡೆಸುವವರ ವಿರುದ್ಧ ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರಗಳು ಪೂರ್ಣ ಸ್ವತಂತ್ರವಾಗಿವೆ. ಅಲ್ಲದೇ, ತನಿಖೆಯನ್ನೂ ನಡೆಸಬೇಕಾಗುತ್ತದೆ ಎಂದು ನಿರ್ದೇಶನ ನೀಡಿದ್ದಾರೆ.

ಸಭೆ ನಂತರ ಕೇಂದ್ರ ಸಚಿವರಾದ ಅನಂತ ಕುಮಾರ್, ಮುಕ್ತಾರ್ ಅಬ್ಬಾಸ್ ನಖ್ವಿ ಮಾಧ್ಯಮಗಳಿಗೆ ಮಾಹಿತಿ ನೀಡಿದರು.

ಗೋರಕ್ಷಣೆ ಹೆಸರಿನಲ್ಲಿ ನಡೆಯುವ ಹಿಂಸಾಚಾರಕ್ಕೆ ರಾಜಕೀಯ ಅಥವಾ ಕೋಮು ಬಣ್ಣ ಬಳಿಯಬಾರದೆಂದು ರಾಜಕೀಯ ಪಕ್ಷಗಳಿಗೆ ಪ್ರಧಾನಿ ಮನವಿ ಮಾಡಿದರು. ಇಂತಹ ಕೃತ್ಯಗಳಿಂದ ದೇಶಕ್ಕೆ ಯಾವುದೇ ಲಾಭ ಆಗುವುದಿಲ್ಲ ಎಂದೂ ಮೋದಿ ಅವರು ಹೇಳಿದ್ದಾಗಿ ಸಚಿವರು ವಿವರಿಸಿದರು.

⏭ ೫



ಪ್ರಧಾನಿ ನರೇಂದ್ರ ಮೋದಿ ಮಾತು ಪ್ರಾಮಾಣಿಕವಾಗಿದ್ದರೆ ಸ್ವಾಗತಾರ್ಹ. ದೇಶದಲ್ಲಿ ಗೋ ಮಾಂಸ ವಹಿವಾಟು ಲಕ್ಷ ಕೋಟಿ ರೂ. ಇದೆ. ನಿರ್ಬಂಧದಿಂದ ರಾಷ್ಟ್ರದ ಆರ್ಥಿಕತೆಗೆ ಹೊಡೆತ ಬೀಳುತ್ತದೆ. ಗೋ ಮಾರಾಟ ನಿರ್ಬಂಧ ನಿಯಮ ಜಾರಿಗೆ ತಂದಿರುವುದು ಸರಿಯಲ್ಲ. ನಿಜವಾಗಿ ಕೇಂದ್ರ ಸರ್ಕಾರಕ್ಕೆ ಕಾಳಜಿ ಇದ್ದರೆ ಕೂಡಲೇ ಈ ನಿರ್ಬಂಧವನ್ನು ರದ್ದು ಮಾಡಲಿ. ನಂತರ ರಾಜ್ಯ ಸರ್ಕಾರಗಳ ಸ್ವಾತಂತ್ರ್ಯದ ಬಗ್ಗೆ ಮಾತನಾಡಲಿ.

–ಕೆ.ಎಸ್.ಭಗವಾನ್, ಚಿಂತಕ

ದೇಶಾದ್ಯಂತ ಗೋರಕ್ಷಕರಿಂದ ಹಲ್ಲೆ ಪ್ರಕರಣ

ಕರ್ನಾಟಕದ ಉಡುಪಿ ಜಿಲ್ಲೆ
ಕರ್ಜಿಕೆ: ೨೦೧೬ರ ಆ.೧೮ ಪ್ರವೀಣ್ ಪೂಜಾರಿ ಹತ್ಯೆ
ಗುಲ್ವಾಡಿ: ೨೦೧೭ರ ಜೂ.೫ ವ್ಯಕ್ತಿ ಮೇಲೆ ಹಲ್ಲೆ

ಉತ್ತರ ಪ್ರದೇಶ
ದಾದ್ರಿ: ೨೦೧೫ರ ಆ.೨ ಮೂವರ ಮೇಲೆ ಹಲ್ಲೆ
ದಾದ್ರಿ: ೨೦೧೫ರ ಸೆ.೨೮ ಮೊಹಮ್ಮದ್ ಅಕ್ಲಕ್ ಹತ್ಯೆ

ಮಧ್ಯಪ್ರದೇಶ
ಕಿರ್ಕಿ: ೨೦೧೫, ಜ.೧೫ ಮುಸ್ಲಿಂ ದಂಪತಿ ಮೇಲೆ ಹಲ್ಲೆ
ಮಾಂದಸರ್: ೨೦೧೬ರ ಜು.೨೭ ಮುಸ್ಲಿಂ ಸ್ತ್ರೀಯರಿಬ್ಬರಿಗೆ ಹಲ್ಲೆ
ಉಜ್ಜೈನ್: ೨೦೧೭ರ ಮೇ ೧೪ ಯುವಕನಿಗೆ ಥಳಿತ

ರಾಜಸ್ತಾನ
ರಾಜಸ್ಮಂದ್: ೨೦೧೬ರ ಅ.೬ ಬಂಜಾರರ ಮೇಲೆ ಹಲ್ಲೆ
ಅಲ್ವಾರ್: ೨೦೧೬ರ ಮೇ ೩೦ ಅಬ್ದುಲ್ ಖುರೇಷಿ ಹತ್ಯೆ
೨೦೧೭ರ ಏ.೫ ರೈತರ ಮೇಲೆ ಹಲ್ಲೆ
೨೦೧೭ರ ಜು.೧೨ ತಮಿಳುನಾಡು ಪಶುಸಂಗೋಪನಾ ಇಲಾಖೆ ಅಧಿಕಾರಿ, ಸಿಬ್ಬಂದಿ ಮೇಲೆ ದಾಳಿ

ಗುಜರಾತ್
ಉನಾ: ೨೦೧೬ರ ಜು.೧೧ ನಾಲ್ವರು ದಲಿತರ ಮೇಲೆ ಹಲ್ಲೆ

ಡಾ.ಸಿ.ಪಿ.ಸಿದ್ದಾಶ್ರಮ ಮೈವಿವಿ ಕುಲಪತಿ?

ರಾಜಭವನ ತಲುಪಿದ ಸಿಎಂ ಶಿಫಾರಸು ಪತ್ರ

ಮೈಸೂರು,ಜು.೧೬– ದೇಶದ ಹಳೆಯ ವಿಶ್ವವಿದ್ಯಾನಿಲಯಗಳಲ್ಲೊಂದಾದ ಶತಮಾನೋತ್ಸವ ಸಂಭ್ರಮ ಕಂಡ ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾಲಯಕ್ಕೆ ಕೊನೆಗೂ ಕುಲಪತಿ ನೇಮಕ ಸಮಯ ಸನ್ನಿಹಿತವಾಗಿದೆ. ಒಂದೆರಡು ದಿನದಲ್ಲಿ ಕುಲಪತಿ ನೇಮಕ ಆದೇಶ ಹೊರಬೀಳಲಿದೆ.

ಮೈಸೂರು ಹಾಗೂ ಬೆಂಗಳೂರು ವಿಶ್ವವಿದ್ಯಾಲಯಗಳಿಗೆ ಖಾಯಂ ಕುಲಪತಿ ನೇಮಕ ೬ ತಿಂಗಳ ಬಳಿಕ ಆಗುತ್ತಿದೆ.

ಕುಲಪತಿಗಳ ಹೆಸರು ಅಂತಿಮಗೊಳಿಸಿದ ಶಿಫಾರಸು ಪತ್ರ ಮುಖ್ಯಮಂತ್ರಿ ಕಚೇರಿಯಿಂದ ರಾಜಭವನಕ್ಕೆ ಶುಕ್ರವಾರ ಸಂಜೆ ತಲುಪಿದೆ. ಉನ್ನತ ಮೂಲಗಳ ಪ್ರಕಾರ ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾಗಿದ್ದ ಹಿರಿಯ ಪ್ರಾಧ್ಯಾಪಕ ಡಾ.ಸಿ.ಪಿ. ಸಿದ್ದಾಶ್ರಮ ಮೈಸೂರು ವಿವಿಗೆ ಕುಲಪತಿಯಾಗಿ ನೇಮಕ ಆಗಬಹುದು ಎಂದು ತಿಳಿದು ಬಂದಿದೆ. ಶೋಧನಾ ಸಮಿತಿ ಶಿಫಾರಸು ಪತ್ರದಲ್ಲಿ ಸೂಚಿಸಿದ್ದ ಬೆಂಗಳೂರು ವಿವಿ ಪ್ರೊ.ಆರ್.ಕೆ ಸೋಮಶೇಖರ್ ವಿರುದ್ಧ ಆರೋಪ ಕೇಳಿ ಬಂದಿದ್ದರಿಂದ ಅವರ ಹೆಸರನ್ನು ಕೈಬಿಡಲಾಗಿದೆ ಎನ್ನಲಾಗಿದೆ.

⏭ ೬

ಕಂದಕಕ್ಕೆ ಬಸ್ ಉರುಳಿ ೧೬ ಅಮರನಾಥ ಯಾತ್ರಿಕರ ಸಾವು

ರಾಮ್‌ಬನ್ ಜಿಲ್ಲೆ ಬಳಿ ಅವಘಡ; ೧೯ ಮಂದಿಗೆ ಗಾಯ

ಶ್ರೀನಗರ,ಜು.೧೬– ಜಮ್ಮುವಿನಿಂದ ಕಾಶ್ಮೀರದತ್ತ ತೆರಳುತ್ತಿದ್ದ ೪೦ಕ್ಕೂ ಹೆಚ್ಚು ಅಮರನಾಥ ಯಾತ್ರಿಕರಿದ್ದ ಬಸ್ ರಾಮ್‌ಬನ್ ಸಮೀಪ ಹೆದ್ದಾರಿಯಲ್ಲಿ ಭಾರೀ ಆಳದ ಕಂದಕಕ್ಕೆ ಉರುಳಿ ಬಿದ್ದಿದ್ದು, ೧೬ ಯಾತ್ರಿಕರು ಅತಿ ದಾರುಣವಾಗಿ ಸಾವನ್ನಪ್ಪಿದ್ದಾರೆ.

ರಾಮ್‌ಬನ್ ಜಿಲ್ಲೆಯ ಹೆದ್ದಾರಿಯಲ್ಲಿ ಸಾಗುತ್ತಿದ್ದಾಗ ಭಾನುವಾರ ಮಧ್ಯಾಹ್ನ ೧.೩೦ರಲ್ಲಿ ಬನಿಹಾಲ್ ಪ್ರದೇಶದ ಸಮೀಪ ಬಸ್‌ನ ಟಯರ್ ಒಮ್ಮೆಲೇ ಸಿಡಿಯಿತು. ಇದರಿಂದ ಬಸ್ ಚಾಲಕನ ನಿಯಂತ್ರಣ ತಪ್ಪಿ ೧೦೦ ಅಡಿಗೂ ಹೆಚ್ಚು ಆಳದ ಕಂದಕಕ್ಕೆ ಉರುಳಿತು.

- ೧೦೦ ಅಡಿ ಆಳದ ಕಂದಕಕ್ಕೆ ಉರುಳಿದ ಬಸ್
- ಮೃತರಲ್ಲಿ ೮ ಮಂದಿ ಅಪ್ರಾಪ್ತ ವಯಸ್ಕರು

ಅಪಘಾತದಲ್ಲಿ ೧೧ ಮಂದಿ ಸ್ಥಳದಲ್ಲೇ ಸಾವನ್ನಪ್ಪಿದರೆ, ಐವರು ಆಸ್ಪತ್ರೆಗೆ ಕರೆದೊಯ್ಯುವಾಗ ಕೊನೆಯುಸಿರೆಳೆದರು. ಮೃತರಲ್ಲಿ ೮ ಮಂದಿ ಚಿಕ್ಕ ವಯಸ್ಸಿನವರಿದ್ದಾರೆ. ೧೯ ಮಂದಿಗೆ ತೀವ್ರ ಸ್ವರೂಪದ ಗಾಯಗಳಾಗಿವೆ. ಹಲವರ ಪರಿಸ್ಥಿತಿ ಗಂಭೀರವಾಗಿದ್ದು, ಸಾವಿನ ಸಂಖ್ಯೆ ಹೆಚ್ಚುವ ಸಾಧ್ಯತೆ ಇದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಹಗ್ಗದ ಸಹಾಯದಿಂದ ಆಳದ ಕಂದಕಕ್ಕೆ ಇಳಿದಿರುವ ಸ್ಥಳೀಯ ನಾಗರಿಕರು, ಪೊಲೀಸರು ಮತ್ತು ಭಾರತೀಯ ಸೇನೆಯ ಯೋಧರು ರಕ್ಷಣಾ ಕಾರ್ಯಾಚರಣೆ ನಡೆಸಿದರು.

ಗಾಯಾಳುಗಳನ್ನು ಕ್ಷಿಪ್ರಗತಿಯಲ್ಲಿ ಆಸ್ಪತ್ರೆಗೆ ಕರೆದೊಯ್ಯಲು ಹೆಲಿಕಾಪ್ಟರ್ ನೆರವೂ ಲಭಿಸಿದೆ ಎಂದು ರಾಮ್‌ಬನ್ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ ಹೇಳಿದ್ದಾರೆ.

ಪ್ರಧಾನಿ ಶೋಕ: ೧೬ ಅಮರನಾಥ ಯಾತ್ರಿಕರ ಸಾವಿನ ಸುದ್ದಿ ಕೇಳಿದ ತಕ್ಷಣ ಪ್ರಧಾನಿ ಮೋದಿ ಟ್ವಿಟರ್‌ನಲ್ಲಿ ಶೋಕ ವ್ಯಕ್ತಪಡಿಸಿದ್ದಾರೆ.

ಕೆ.ಜಿ.ಕೊಪ್ಪಲು ದಿ.ಪೈ.ಬಸವಯ್ಯ ರಾಷ್ಟ್ರೀಯ ಕುಸ್ತಿ ಪಂದ್ಯಾವಳಿ

ಪೈ.ಸೋಮವೀರ್‌ಗೆ ಪ್ರಶಸ್ತಿ

ಮೈಸೂರು,ಜು.೧೬– ಹರಿಯಾಣದ ಪೈ.ಸೋಮವೀರ್ ರೋತಕ್ ದಿ.ಪೈ.ಬಸವಯ್ಯ ರಾಷ್ಟ್ರೀಯ ಕುಸ್ತಿ ಪ್ರಶಸ್ತಿಗೆ ಭಾಜನರಾದರು.

ನಗರದ ಕನ್ನೇಗೌಡನ ಕೊಪ್ಪಲಿನಲ್ಲಿ ಭಾನುವಾರ ಸಂಜೆಯಿಂದ ರಾತ್ರಿ ೧೧.೩೦ರವರೆಗೂ ದಿ.ಪೈ. ಬಸವಯ್ಯ ರಾಷ್ಟ್ರೀಯ ಕುಸ್ತಿ ಪಂದ್ಯಾವಳಿ ನಡೆಯಿತು. ಪಂಜಾಬ್‌ನ ಪೈ.ಯುಧಿಷ್ಠಿರ ಅವರನ್ನು ಮಣಿಸಿದ ರೋತಕ್ ಪ್ರಶಸ್ತಿ ಮುಡಿಗೇರಿಸಿಕೊಂಡರು. ಪಂದ್ಯಾವಳಿಯ ಕೇಂದ್ರ ಬಿಂದುವಾಗಿದ್ದ ಈ ಜೋಡಿಯ ಸೆಣಸಾಟ ಕುಸ್ತಿಪ್ರಿಯರಿಗೆ ರಸದೌತಣ ನೀಡಿತು.

⏭ ೬

ಮೈಸೂರಿನ ಕೆ.ಜಿ.ಕೊಪ್ಪಲಿನಲ್ಲಿ ಭಾನುವಾರ ದಿ.ಪೈ. ಬಸವಯ್ಯ ರಾಷ್ಟ್ರೀಯ ಕುಸ್ತಿ ಪಂದ್ಯಾವಳಿಯಲ್ಲಿ ಪೈಲ್ವಾನ್‌ಗಳಿಬ್ಬರ ಜಿಗಿಪಟ್ಟಿನ ರೋಚಕ ದೃಶ್ಯ

ಭಿತ್ತಿಪತ್ರ ಹಾವಳಿ; ೬ ಸಂಸ್ಥೆ ವಿರುದ್ಧ ಎಫ್‌ಐಆರ್

ಸಾಂಸ್ಕೃತಿಕ ನಗರಿ ಅಂದಗೆಡಿಸಿದವರ ವಿರುದ್ಧ ಪಾಲಿಕೆ ಕಠಿಣ ಕ್ರಮ

ಮೈಸೂರು,ಜು.೧೬– ಪ್ರಚಾರಕ್ಕಾಗಿ ರಸ್ತೆಯ ಮಗ್ಗಲು ಗೋಡೆ, ಕಾಂಪೌಂಡ್‌ಗಳ ಮೇಲೆ ಪೋಸ್ಟರ್ (ಭಿತ್ತಿಪತ್ರ) ಅಂಟಿಸುವವರ ವಿರುದ್ಧ ಮಹಾನಗರ ಪಾಲಿಕೆ ಅಧಿಕಾರಿಗಳು ಕಾನೂನು ಸಮರ ಸಾರಿದ್ದಾರೆ. ಭಿತ್ತಿಪತ್ರ ಅಂಟಿಸಿ ನಗರದ ಅಂದ ಕೆಡಿಸಿದ ಆರೋಪದ ಮೇರೆಗೆ ೬ ಸಂಘ–ಸಂಸ್ಥೆಗಳ ವಿರುದ್ಧ ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಸರ್ಕಾರಿ ಕಟ್ಟಡಗಳ ಮೇಲೆ ಪೋಸ್ಟರ್ ಅಂಟಿಸಿದ್ದ ವಿವಿಧ ಸಂಘಟನೆಗಳ ವಿರುದ್ಧ ನಗರಪಾಲಿಕೆ ಆಯುಕ್ತರ ಸೂಚನೆಗೆ ಮೇರೆಗೆ ಪೊಲೀಸ್ ಠಾಣೆಗಳಲ್ಲಿ ದೂರು ದಾಖಲಿಸುವ ಕಾರ್ಯ ಅದಾಗಲೇ ಆರಂಭಗೊಂಡಿದೆ.

ಸಾಂಸ್ಕೃತಿಕ ನಗರಿ ಸ್ವಚ್ಛತೆ ಮತ್ತು ಸೌಂದರ್ಯಕ್ಕೂ ಹೆಸರುವಾಸಿ. ಆದರೆ, ಅಪವಾದ ಎಂಬಂತೆ ಕೆಲ ಸಂಘ, ಸಂಸ್ಥೆಗಳ ಪದಾಧಿಕಾರಿಗಳು ಪ್ರಚಾರಕ್ಕಾಗಿ ಪೋಸ್ಟರ್ ಅಂಟಿಸಿ ನಗರದ ಅಂದಗೆಡಿಸುತ್ತಿದ್ದಾರೆ. ಅಲ್ಲದೇ, ಹುಟ್ಟುಹಬ್ಬ, ಅಭಿನಂದನೆ, ಹಬ್ಬಗಳ ಆಚರಣೆ ಹೆಸರಿನಲ್ಲಿಯೂ ಬಹಳಷ್ಟು ಮಂದಿ ಭಿತ್ತಿಚಿತ್ರ ಅಂಟಿಸುವುದು, ವಿನೈಲ್ ಫಲಕ ಅಳವಡಿಸುವುದು ಮಾಡುತ್ತಿದ್ದಾರೆ. ಇಂತಹವರಿಗೆ ಕಡಿವಾಣ ಹಾಕಲು ನಗರಪಾಲಿಕೆ ಆಯುಕ್ತ ಜಿ.ಜಗದೀಶ್ ಮುಂದಾಗಿದ್ದಾರೆ.

ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ಸರ್ಕಾರಿ ಜಾಗಗಳ ಕಾಂಪೌಂಡ್ ಹಾಗೂ ಗೋಡೆಗಳ ಮೇಲೆ ಪೋಸ್ಟರ್ ಅಂಟಿಸುವುದನ್ನು ನಗರ ಪಾಲಿಕೆ ನಿಷೇಧಿಸಿದೆ. ಇದು ಗೊತ್ತಿದ್ದರೂ ಕೆಲ ಸಂಘಟನೆಗಳ ಸದಸ್ಯರು ಪ್ರಚಾರಕ್ಕಾಗಿ ಸಿಕ್ಕಸಿಕ್ಕಲ್ಲಿ ಪೋಸ್ಟರ್‌ಗಳನ್ನು ಅಂಟಿಸುವುದನ್ನು ಎಗ್ಗಿಲ್ಲದೇ ಮಾಡುತ್ತಿದ್ದಾರೆ.

⏭ ೫

ಮೈಸೂರು ನಗರ ಸೌಂದರ್ಯಕ್ಕೆ ಹೆಸರುವಾಸಿ. ಅದನ್ನು ಉಳಿಸಬೇಕಾದ ಜವಾಬ್ದಾರಿ ಎಲ್ಲರ ಮೇಲಿದೆ. ನಗರದ ಎಲ್ಲೆಂದರಲ್ಲಿ ಪೋಸ್ಟರ್ ಅಂಟಿಸುವಂತಿಲ್ಲ ಎಂಬ ನಿಯಮ ಹಿಂದಿನಿಂದಲೂ ಇದೆ. ಅದನ್ನು ಪರಿಣಾಮಕಾರಿಯಾಗಿ ಈಗ ಅನುಷ್ಠಾನಕ್ಕೆ ತರಲಾಗುತ್ತಿದೆ. ಸಾರ್ವಜನಿಕರು ನಗರದ ಸೌಂದರ್ಯ ಕಾಪಾಡುವ ದೃಷ್ಟಿಯಿಂದ ನಗರಪಾಲಿಕೆ ಜೊತೆಗೆ ಕೈ ಜೋಡಿಸಬೇಕು.

-ಜಿ.ಜಗದೀಶ್, ನಗರಪಾಲಿಕೆ ಆಯುಕ್ತರು

ದಸರೆಗೆ ಮಿರುಗಲಿವೆ ಮೈಸೂರು ರಸ್ತೆಗಳು

ಜಂಬೂ ಸವಾರಿ ರಸ್ತೆಗೆ ಕಾಂಕ್ರೀಟ್; ಬಾಕಿ ಕಾಮಗಾರಿ ಶೀಘ್ರ ಪೂರ್ಣ

ಸಾಲೋಮನ್

ಮೈಸೂರು,ಜು.೧೬– ವಿಶ್ವವಿಖ್ಯಾತ ದಸರಾ ಮಹೋತ್ಸವದ ಮೆರವಣಿಗೆ ಹೋಗುವ ಪ್ರಮುಖ ರಸ್ತೆಗಳಿಗೆ ಕಾಂಕ್ರೀಟ್ ಅಳವಡಿಸಲಾಗಿದೆ. ಕೆಲವೆಡೆ ಶೇ.೩೦ರಷ್ಟು ರಸ್ತೆ ದುರಸ್ತಿ ಮಾತ್ರ ಬಾಕಿ ಉಳಿದಿದೆ.

ಸೆ.೨೧ರಿಂದ ಆರಂಭವಾಗಲಿರುವ ದಸರಾ ಮಹೋತ್ಸವಕ್ಕೆ ದೇಶ ವಿದೇಶದಿಂದ ಬರುವ ಪ್ರವಾಸಿಗರಿಗೆ ಇನ್ನು ಕಳಪೆ ರಸ್ತೆಗಳ ದರ್ಶನ ಆಗುವ ಮಾತೇ ಇಲ್ಲ.

ನಗರದ ರಾಮಸ್ವಾಮಿ ವೃತ್ತದಿಂದ ಹಿಡಿದು ಚಾಮರಾಜ ಜೋಡಿ ರಸ್ತೆ ಮಾರ್ಗವಾಗಿ ಹಾರ್ಡಿಂಗ್ ವೃತ್ತದವರೆಗೆ ರಸ್ತೆಗೆ ಕಾಂಕ್ರೀಟ್ ಹಾಕಲಾಗಿದೆ. ಅಲ್ಲಿಂದ ಮುಂದೆ ಅರಮನೆ ಮುಂಭಾಗದ ವೃತ್ತ, ಕೆ.ಆರ್.ವೃತ್ತ ಮಾರ್ಗವಾಗಿ ದಸರಾ ಮೆರವಣಿಗೆ ಸಾಗುವ ನ್ಯೂ ಸಯ್ಯಾಜಿರಾವ್ ರಸ್ತೆಯ ಆರ್.ಎಂ.ಸಿ ವೃತ್ತ, ಅಲ್ಲಿಂದ ಹೈವೇ ವೃತ್ತ ಮೂಲಕ ಬನ್ನಿ ಮಂಟಪದ ಮಿಲೆನಿಯಂ ವೃತ್ತದವರೆಗೂ ರಸ್ತೆಗೆ ಸಿಮೆಂಟಿಂಗ್ ಮಾಡಲಾಗಿದೆ. ನಗರದ ಪ್ರಮುಖ ರಸ್ತೆಗಳನ್ನು ದಸರಾ ವೇಳೆಗೆ ಸುಸಜ್ಜಿತಗೊಳಿಸಲಾಗುತ್ತಿದೆ.

ನಗರದ ಪ್ರಮುಖ ಭಾಗಗಳಲ್ಲಿ ಹಾದು ಹೋಗುವ ಈ ರಸ್ತೆಯನ್ನು ಡಾಂಬರೀಕರಣ ಮಾಡಲು ಲೋಕೋಪಯೋಗಿ ಇಲಾಖೆಗೆ ೨೦೧೫ರಲ್ಲಿ ರಾಜ್ಯ ಸರ್ಕಾರ ೫೦ ಕೋಟಿ ರೂ. ಬಿಡುಗಡೆ ಮಾಡಿತ್ತು.

ಅಲ್ಲದೆ ನಗರದ ಬಹುತೇಕ ರಸ್ತೆಗಳನ್ನು ಮಹಾನಗರ ಪಾಲಿಕೆ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದ ಅನುದಾನಗಳಿಂದ ಅಭಿವೃದ್ಧಿಪಡಿಸಲಾಗಿದೆ.

ನಗರದ ಇನ್ನೂ ಕೆಲವೆಡೆ ರಸ್ತೆ ಕಾಮಗಾರಿ ಪ್ರಗತಿಯಲ್ಲಿದ್ದು, ದಸರಾ ಆರಂಭಕ್ಕೂ ಮುನ್ನ ಮುಗಿಯುವ ನಿರೀಕ್ಷೆ ಇದೆ. ನಗರದ ಹೊರವರ್ತುಲ ರಸ್ತೆ ಕಾಮಗಾರಿಯೂ ಪ್ರಗತಿಯಲ್ಲಿದ್ದು, ಕಾಮಗಾರಿ ಬೇಗ ಮುಗಿಯಲಿದೆ.

೪ ದಿಕ್ಕಿನಲ್ಲೂ ರಸ್ತೆ ದುರಸ್ತಿ: ಪ್ರಮುಖವಾಗಿ ಬೆಂಗಳೂರಿನಿಂದ ನಗರ ಪ್ರವೇಶಿಸುವ ಕೊಲಂಬಿಯಾ ಏಷಿಯಾ ಆಸ್ಪತ್ರೆ ಜಂಕ್ಷನ್‌ನಿಂದ ಹಾರ್ಡಿಂಗ್ ವೃತ್ತದವರೆಗಿನ ರಸ್ತೆ ದುರಸ್ತಿ ಆಗಬೇಕಿದೆ.

⏭ ೬

ಜಯಚಾಮರಾಜ ಮತ್ತು ಕೃಷ್ಣರಾಜ ವೃತ್ತಗಳನ್ನು ಜೋಡಿಸುವ ರಸ್ತೆ ಈಗ ಸುಸಜ್ಜಿತವಾಗಿದೆ.



ಈ ಬಾರಿ ರಸ್ತೆಗಳ ಬಗ್ಗೆ ವಿಶೇಷ ಕಾಳಜಿ ವಹಿಸುತ್ತಿದ್ದೇವೆ. ಸದ್ಯಕ್ಕೆ ರಸ್ತೆಗಳ ಗುಂಡಿ ಮುಚ್ಚುವುದು, ತಿರುವು–ವಿಭಜಕಗಳಿಗೆ ಬಣ್ಣ ಬಳಿಯುವುದು ಹಾಗೂ ವಿಶಾಲವಾದ ವೃತ್ತ ಮತ್ತು ಕಾರಂಜಿಗಳನ್ನು ಅಭಿವೃದ್ಧಿಗೊಳಿಸಲು ಜಿಲ್ಲಾ ಉಸ್ತುವಾರಿ ಸಚಿವರು ಸೂಚನೆ ನೀಡಿದ್ದಾರೆ. ಆ ಕೆಲಸಗಳನ್ನು ಸದ್ಯದಲ್ಲೇ ಕೈಗೆತ್ತಿಕೊಳ್ಳಲಿದ್ದೇವೆ.

-ಜಿ.ಜಗದೀಶ್, ಆಯುಕ್ತರು ಮೈಸೂರು ಮಹಾನಗರ ಪಾಲಿಕೆ

ಇಂದು ರಾಷ್ಟ್ರಪತಿ ಚುನಾವಣೆ

ಹೊಸದಿಲ್ಲಿ: ಭಾರತದ ಸರ್ವೋಚ್ಚ ಹಾಗೂ ಸಾಂವಿಧಾನಿಕ ಹುದ್ದೆಯಾದ ರಾಷ್ಟ್ರಪತಿ ಸ್ಥಾನಕ್ಕೆ ಸೋಮವಾರ ಚುನಾವಣೆ ನಡೆಯಲಿದ್ದು, ದೇಶದ ಎಲ್ಲಾ ವಿಧಾನಸಭೆಗಳು, ಲೋಕಸಭೆಯಲ್ಲಿ ಮತಗಟ್ಟೆಗಳು ಸಿದ್ಧವಾಗಿವೆ. ಮತದಾನಕ್ಕೆ ಅಗತ್ಯವಾದ ಎಲ್ಲ ಸಿದ್ಧತೆಗಳೂ ಭಾನುವಾರವೇ ಪೂರ್ಣಗೊಂಡಿವೆ.

ವಿಧಾನಸೌಧದಲ್ಲೂ ಮತದಾನಕ್ಕೆ ಸಿದ್ಧತೆ

⏭ ವರದಿ ಪುಟ ೨

ಮೈಸೂರು NECC
ಕೋಳಿ ಮೊಟ್ಟೆ ಧಾರಣೆ
100ಕ್ಕೆ Rs. 360
ದೂರವಾಣಿ:
2425156

Monday 17 July 2017
ಆಂದೋಲನ
ಅಂತರ ಜಾಲ ವಿಳಾಸ
andolana.epapertoday.com
ಸುದ್ದಿಗಾಗಿ
andolana@gmail.com

NH Avati L Ramaseshaiah and Lakshmi Devamma Multispeciality Clinic
NH Helpline 186 0208 0208
ಉಚಿತ ಡಯಾಬಿಟಿಸ್ (ಮಧುಮೇಹ) ಕ್ಲಿನಿಕ್
18, 19 ಮತ್ತು 20 ಜುಲೈ, 2017 (ಬೆಳಗ್ಗೆ 9.00 ರಿಂದ 2.00)
ಅಪಾಯಕಾರಿ ಅಂಶಗಳು:
- ಕುಟುಂಬ ಇತಿಹಾಸ
- ವ್ಯಾಯಾಮದ ಕೊರತೆ
- ಅನಾರೋಗ್ಯಕರ ಆಹಾರ ಪದ್ಧತಿ
- ಅತಿಯಾದ ತೂಕ
ಉಚಿತ ಸೇವೆಗಳು:
- ರಕ್ತದೊತ್ತಡ
- ಆರ್‌ಬಿಎಸ್
- ಯೂರಿನ್ ರೊಟೀನ್
- ವೈದ್ಯರೊಂದಿಗೆ ಸಮಾಲೋಚನೆ
ಸ್ಥಳ: 80/1, ವಿನೋಬ ರಸ್ತೆ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪಕ್ಕ ಶಿವರಾಮಪೇಟೆ, ಮೈಸೂರು
ನೋಂದಣಿಗಾಗಿ ಕರೆಮಾಡಿ: 88847 44144
ಮೈಸೂರಿನ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಒಂದು ಘಟಕ